# ಮೊಗಸಾಲೆಯವರ ಕಾವ್ಯ ಪಯಣ - ಒಂದು ಅವಲೋಕನ

**ಡಾ.ಬಸವರಾಜ ಪೂಜಾರ್, ಸಹ ಪ್ರಾಧ್ಯಾಪಕರು-ಕನ್ನಡ, ಎಸ್ ಜಿ ಕಾಲೇಜು,ಕೊಪ್ಪಳ.**

## ಪೀಠಿಕೆ:

ಪ್ರಭುತ್ವದ ಕುರೂಪಿ ಕಬಂಧ ಬಾಹುಗಳ ಚಾಚುವಿಕೆಯಿಂದ ಸಾಮಾನ್ಯರು ಅನುಭವಿಸುವ ಬವಣೆಗಳನ್ನು ಕಾವ್ಯ ಕಟ್ಟುತ್ತದೆ. ತೀವ್ರವಾದ ಆಕ್ರೋಶದ ಒಡಲುರಿಯಲ್ಲಿ ಬೇಯುವಂತೆ ಏಕಮುಖವಾಗಿ ಲೋಕವನ್ನು ಕಾವ್ಯ ನೋಡುವುದಿಲ್ಲ. ಮಾನವೀಯ ಸ್ಪರ್ಶದ ಮೂಲಕ ವ್ಯವಸ್ಥೆಯ ಕರಾಳತೆಯನ್ನು ಚಾರಿತ್ರಿಕವಾಗಿ ಪ್ರತಿನಿಧಿಸುತ್ತದೆ. ಧರ್ಮ, ಅಧಿಕಾರ, ಪ್ರಭುತ್ವ, ಪುರುಷಕೇಂದ್ರಿತ ಮನೋಭಾವಗಳು 'ಮಹಿಳೆ'ಯರ ಭಾವಕೋಶವನ್ನು ಕರಿಗಿಸಿ ತನ್ನ ಅಧೀನಕ್ಕೆ ಈಡು ಮಾಡಿದ ಸಾಂಸ್ಕೃತಿಕ ಸಂಗತಿಗಳನ್ನು ವಿಷಾದ, ವ್ಯಂಗ್ಯದಲ್ಲಿ ನೋಡುತ್ತದೆ. ಅಮಾನವೀಯ ಕ್ರೌರ್ಯಕ್ಕೆ ಒಳಗಾಗುವ ಜೀವಿಗಳ ಅಸಹಾಯಕ ಬದುಕಿನ ವಿನ್ಯಾಸವನ್ನು ಕಾವ್ಯ ಚಿಂತಿಸುತ್ತದೆ. ಶುದ್ಧ ಕಲಾತ್ಮಕತೆಯ ಗೊಡವೆಗೆ ಹೋಗದೆ ಸಾಮಾನ್ಯರ ಬಾಳನ್ನು ಕಾವ್ಯ ಹೇಗೆ ಹಸನು ಮಾಡಬಹುದು ಎಂಬುದರ ಕಡೆ ಕಾವ್ಯದ ಆಸಕ್ತಿ ಇದೆ. ಪುರಾಣ, ಸಾಮಾಜಿಕ ನಂಬಿಕೆಗಳ ಜೊತೆ ಕಾವ್ಯ ಮುಖಾಮುಖಿಯಾಗುತ್ತದೆ. ಹೆಣ್ಣನಕ್ಕಂಟಿದ ಚಾರಿತ್ರಿಕ ಶಾಪವನ್ನು ವಿಮೋಚನೆಗೊಳಿಸುವ ಚಿಂತನೆಯನ್ನು ಕಾವ್ಯ ಗಂಭೀರವಾಗಿ ಮಾಡುತ್ತದೆ. ಸಾಮಾಜಿಕ ಅರಿವಿನ ವಿವೇಕವು ಕಾವ್ಯದ ಮುಖ್ಯ ಬಿತ್ತಿಯಾಗಿದೆ.

ಲೋಕದ ವಾಸ್ತವಗಳ ಮುಖವಾಡಗಳೊಂದಿಗೆ ಮುಖಾಮುಖಿಯಾಗುವ ನಾ. ಮೊಗಸಾಲೆಯವರ ಕವಿತೆಗಳು ದೈನಂದಿನ ಬದುಕಿನ ವಿನ್ಯಾಸವನ್ನೇ ಕಾವ್ಯವನ್ನಾಗಿ ಮಾಡುತ್ತದೆ. ಇಲ್ಲಿ ನಡೆಯುವ ಅನುಕ್ಷಣದ ವ್ಯಾಪಾರಗಳನ್ನು ಒಳಗು ಮಾಡಿಕೊಂಡು ಅದಕ್ಕೊಂದು ಅಸ್ಮಿತೆ ತುಂಬುವ ಕಾವ್ಯ ಸೌಂದರ್ಯ ಇವರದು. ಹುಸಿ ಕಾವ್ಯ ಸೊಬಗಿನಲ್ಲಿ ಇವರಿಗೆ ನಂಬಿಕೆಯಿಲ್ಲ. ಅನುಭವದೊಂದಿಗೆ ಬೆರೆಯುವ ಪ್ರಜ್ಞೆಯೆ ಅವರಿಗೆ ಮುಖ್ಯವಾದುದು. ವಾಸ್ತವವನ್ನು ಮೀರುವ ಕಲ್ಪನೆಗಿಂತಲೂ ವಾಸ್ತವವನ್ನು ಹಸನು ಮಾಡುವ ಕಡೆ ಕಾವ್ಯದ ನೋಟವಿದೆ. ಇರುವ ಲೋಕವೇ ಅವರಿಗೆ ಪ್ರಮಾಣ. ಯಾವುದು ಅನುಭವಕ್ಕೆ ದಕ್ಕುತ್ತದೆ, ನಿಲ್ಲುತ್ತದೆ ಅದೇ ಮುಖ್ಯ. ಅದು ಚರಿತ್ರೆ, ಪುರಾಣ, ದೇವರು, ನಂಬಿಕೆ, ದೈವ, ಸಂಬಂಧ ಯಾವುದೇ ಆಗಲಿ ಜೀವದೊಂದಿಗೆ ಮಿಡಿಯಬೇಕು. ಅನುಕ್ಷಣವು ಉತ್ಕಟವಾಗಿ ಬದುಕುವುದು, ಅದನ್ನು ದಾಟಿಸುವುದರಲ್ಲಿಯೇ ಕಾವ್ಯದ ತಲ್ಲೀನತೆ ಇದೆ. ಕಾವ್ಯ ಪ್ರಜ್ಞೆಯ ಕುತ್ತಿಗೆ ಹಿಚುಕಿ ಅದನ್ನು ಮೌನವಾಗಿಸಲು ಜಗತ್ತು ಪ್ರಯತ್ನ ಮಾಡುತ್ತದೆ. ಆದರೆ ಕಾವ್ಯ ಪ್ರಜ್ಞೆಯ ಹಟವು ಕಡಿಮೆಯದಲ್ಲ. ಈ ಪ್ರಜ್ಞೆಯ ಮೌನವೂ ಕೂಡ ಕವಿತೆಯಾಗಬಲ್ಲದು. ಈ ಮೌನದ ಒಳಗಿನ ಕರ್ಷಣವನ್ನು ಕಾವ್ಯದ ಬೆಡಗಿನಲ್ಲಿ ಮಾತಾಗಿಸುತ್ತಾರೆ. ಭೌತಿಕ ಜಗತ್ತಿನ ಪ್ರತಿಯೊಂದು ಗೋಚರ ವಸ್ತುಗಳು ಕಾವ್ಯದ ನೆಲೆಯನ್ನು ಪಡೆಯುತ್ತವೆ. ಇದರೊಂದಿಗೆ ಮನುಷ್ಯರ ಲೋಕವೂ ಅಷ್ಟೇ ತದಾತ್ಮ್ಯತೆ ಪಡೆದುಕೊಳ್ಳುತ್ತದೆ. ಬದಲಾಗುವ ಬದುಕಿನ ಪರಿಣಾಮಗಳು ಇವರ ಕಾವ್ಯವನ್ನು ಕಂಗೆಡಿಸದೆ, ತನ್ಮಯತೆಯ ಸಂವಾದವನ್ನು ಹುಟ್ಟುಹಾಕುತ್ತವೆ.

ಭೌತಿಕ ಪ್ರಪಂಚ ರೂಪ ತಾಳಿ ಕೂಡ ಮೂಲ ನೆಲೆಯನ್ನು ಮರೆಯದ ಉಪಮಾನ, ಉಪಮೇಯವನ್ನು ಮೀರಿ ತಾನೇ ಒಂದು ಕಾವ್ಯವಾಗುವ ವಿಸ್ಮಯ ಈ ಸಂಕಲನದಲ್ಲಿದೆ. ಮೊಗಸಾಲೆಯವರ ಪ್ರತಿಭೆ ಸದ್ದಿಲ್ಲದೆ ಪ್ರೌಢವಾಗುವ, ಪರಿಣತವಾಗುವ, ಊರ್ಧ್ವಗಾಮಿಯಾಗುವ, ಕನಸನ್ನು ನನಸಾಗಿಸಿಕೊಳ್ಳುವ ಮಾಂತ್ರಿಕತೆ ಹೊಸ ಲಯವನ್ನು ಪಡೆದಿದೆ.

ಇಲ್ಲಿನ ಹಲವು ಪದ್ಯಗಳು ಬಿಡಿ ಬಿಡಿ ರಚನೆಗಳಂತೆ ಕಂಡರೂ ಅವುಗಳಲ್ಲಿ ಒಳಸಂಬಂಧದ ಸೆಲೆಯಾಗಿ ತಾತ್ವಿಕ ಚಿಂತನೆ ವಿಸ್ತರಿಸಿಕೊಂಡಿದೆ. ಜಿಜ್ಞಾಸೆಯ ವೃಕ್ಷ ಮೈತಳೆದಂತೆ ಇವರ ಕವಿತೆಗಳ ಸೃಷ್ಟಿ ಇದೆ. ಇವರ ಕವನಗಳಲ್ಲಿ ಲೋಕ ಪದಾರ್ಥಗಳ ಮತ್ತು ಭಾವನೆಗಳ ಅಸಂಖ್ಯಾತ ದಾಖಲೆಗಳು ಮಿಕ್ಕು ಮೀರಿ ಬಳಕೆಯಾಗುವುದನ್ನು ಗುರುತಿಸಬಹುದು. ಮನುಷ್ಯನ ಕೇಡುಗಳನ್ನು ಶೋಧಿಸುತ್ತಲೇ ಅದನ್ನು ಮಾನವೀಯಗೊಳಿಸುವ ತುಡಿತ ತೀವ್ರವಾಗಿ ಇವರ ಕಾವ್ಯದಲ್ಲಿದೆ.

ಅನುಭವನಿಷ್ಠತೆಯೆ ಕೇವಲ ಭಾಷೆಯ ಲೀಲೆಯಾಗಿರುವದಿಲ್ಲ, ಅಲಂಕಾರವೂ ಆಗಿರುವದಿಲ್ಲ. ವ್ಯಕ್ತಿತ್ವದೊಳಗಿನ ಕಿಚ್ಚಿಗೆ, ಉಜ್ವಲತೆಗೆ ಸಂಬಂಧಿಸದ್ದಾಗಿರುತ್ತದೆ. ತಾನೇ ಉರುವಲಾಗಿ, ತಾನೇ ಬೆಂಕಿಯಾಗಿ, ತಾನೇ ಸುಟ್ಟುಕೊಂಡು ತನಗಾಗಿ ನುಡಿದ ಮಾತು ಪುಣ್ಯವಿದ್ದವರಿಗೆ ಬೆಳಕು ತೋರುವ ಮಾತಾಗುತ್ತದೆ. ಇಂತಹ ಅನೇಕ ಕಾವ್ಯ ಜೀವಗಳು ಈ ಸಂಕಲನದಲ್ಲಿವೆ.

ರೂಪ ರೂಪಕಗಳಲ್ಲಿ ಹಿಡಿದಿಡಲು ನಿನ್ನ ಬಯಸಿದೆ
ಸಿಗಲಿಲ್ಲ ನೀನು
ಕುಳಿತಿರುವೆ ಗರಿಕೆ ಹುಲ್ಲಿನ ಮೇಲೆ ಮಂಜಾಗಿ

ಮನುಷ್ಯನ ಪ್ರಜ್ಞೆ ಸೃಷ್ಟಿಸುವ ಸಂಕೇತಗಳನ್ನು ಇವರ ಕವಿತೆಗಳು ಒಪ್ಪುವುದಿಲ್ಲ. ಬಹಳ ಸಹಜವಾದ ಭಾವಲೀಲೆಗಳನ್ನು ತನ್ನರವಿನ ಭಾಗವಾಗಿಸಿಕೊಳ್ಳುತ್ತವೆ. ಕಾವ್ಯ ಮತ್ತು ದೈವತ್ವ ಬೇರೆಯಲ್ಲ. ಒಂದರೊಳಗೊಂದು ಬೆರೆತ ನೀರು ಇಬ್ಬನಿ. ಆ ಭಾವದಲ್ಲಿಯೇ ದೇವರ ಸಾಕ್ಷಾತ್ಕಾರ ಹಾಗೂ ಕಲೆಯ ದಿವ್ಯತೆ ಇದೆ ಎಂಬ ಅಚಲ ನಂಬಿಕೆ ಇವರ ಕಾವ್ಯಕ್ಕಿದೆ. ಪ್ರಾರ್ಥನೆಯ ಸೌಂದರ್ಯದ ಸಾಕಾರ ರೂಪವನ್ನು ಮಗುತನದ ಮುಗ್ಧತೆಯಲ್ಲಿ ಕಾಣುತ್ತಾರೆ.

ಬಹುತ್ವದ ಬಯಲಿಲ್ಲಿ ಬಯಲಾಗಿ ಉಳಿದಿಲ್ಲ
ಎದ್ದು ನಿಂತಿದೆ ಅಲ್ಲಿ ಬಹುಮತದ ಸೌಧ
ಕತ್ತಿಸುತ್ತಿಗೆ ಬಿಲ್ಲು ಬಾಣಗಳ ಹಿಡಿದ ಕೈ
ಕೈಲಾಗದಂತಾಗಿ ನಿಂತಿದೆ, ಅನಾಥ !

ವಾಸ್ತವದ ಕೇಡಿನ ದರ್ಶನವನ್ನು ಈ ಕವಿತೆ ಬಿಂಬಿಸುತ್ತದೆ. ಬಹುತ್ವ ಬದುಕಿನ ಕನಸಾಗಿ ಉಳಿದಿಲ್ಲ. ವೈವಿಧ್ಯತೆಯನ್ನು ಮುರುಟಿಸುವ ಹುನ್ನಾರಗಳು ಮೈ ಪಡೆದು, ಗಾಯಗಳನ್ನು ಬಿತ್ತುವ ಪ್ರಭುತ್ವಗಳು ಬೆಳೆಯುತ್ತಿವೆ. ಇದು ಸೈದ್ಧಾಂತಿಕ ಸಂಕೀರ್ಣದಂತೆ ಕಾಣುತ್ತದೆ. ಪರಂಪರಾನುಗತವಾಗಿ ಬಹುತ್ವದ ಸಂವೇದನೆಗೆ ತುಡಿಯುತ್ತಾ ಬಂದ ಕಾವ್ಯ ಅದನ್ನು ಕಾಪಿಟ್ಟುಕೊಳ್ಳುವ ಹೊಣೆಗಾರಿಕೆಯನ್ನು ಹೊತ್ತುಕೊಂಡಿದೆ. ಆ ಹೊಣೆಗಾರಿಕೆ `ಕೈಲಾಗದಂತಾಗಿ ನಿಂತಿದೆ' ಎಂದು ಕವಿತೆ ವಿಷಾದಿಸುತ್ತದೆ.

"ಗೊತ್ತೆ ನಿಮಗೆ ಗೋಡೆಗಡಿಯಾರದ ಹಿಂದೆ ಗುಬ್ಬಿ ಗೂಡುಕಟ್ಟಿ
ಇದೀಗ ಮೊಟ್ಟೆಗಳು ಒಡೆದು ಮರಿಗಳು ಹೊರಬಂದಿವೆ
ಇದೇ ದೊಡ್ಡ ಹಬ್ಬ, ನಾವೀಗ ಈ ಲೋಕಕ್ಕೇ ಅಜ್ಜ ಅಜ್ಜಿ

ಯುಗಾದಿಯ ಬಗ್ಗೆ ಹೊಸ ನೋಟದಲ್ಲಿ ಕವಿತೆ ಆಲೋಚಿಸುತ್ತದೆ. ಪ್ರಕೃತಿಯ ಚಲನೆಗಳು ಸಹಜವಾದರೂ ಮನುಷ್ಯನಿಗೆ ಬೆರಗನ್ನುಂಟು ಮಾಡುತ್ತವೆ. ಆ ಸಂಗತಿಗಳನ್ನು ಬದುಕಿಗೆ ಅನ್ವಯಿಸಿಕೊಂಡು ತನ್ನ ಬದುಕಿನಲಿ ಹೊಸತನ್ನು ಕಂಡುಕೊಳ್ಳುವುದು ಮುಖ್ಯ. `ಆಡುವ ಮಕ್ಕಳಿಲ್ಲದೆ ಬಯಲಾಗಿದೆ ನಮ್ಮನೆಯಂಗಳ ಹಿಂದೆ ಆಗಿತ್ತದು ಕುಣಿವ ಕಾಲಿಗೆ ರಂಗಸ್ಥಳ ನಾನಿದ್ದೆ, ಅಪ ಇದ್ದರು, ಅಜ್ಜ ಇದ್ದರು ಕುಣಿದು ಅಲ್ಲಿ ಈಗ ಮರೆತರೂ ಅದು, ತನ್ನೊಳಗೇ ಕುಣಿಯುತ್ತಿರಬಹುದಲ್ಲ ಮೆಲ್ಲ' ಎಂದು ಯುಗಾದಿಗೆ ಬದುಕಿನ ಸಾತತ್ಯವನ್ನು ನೀಡುತ್ತದೆ. `ಇದೀಗ ಮೊಟ್ಟೆ ಒಡೆದು ಮರಿಗಳು ಹೊರಬಂದಿವೆ' ಎಂಬ ಕಾವ್ಯ ರೂಪಕ ಬದುಕಿನ ಹೊಸತನ ಮತ್ತು ನಿರಂತರತೆಯನ್ನು ಹೇಳುತ್ತದೆ.

ಸುಮ್ಮನೆ ನಿಂತೆ ಭೂಮಿ ಆಕಾಶವ ನೋಡುತ್ತ
ಧ್ಯಾನಿಸುವಂತೆ ಇಹಪರಗಳ
ಇಲ್ಲೇ ಎಲ್ಲೋ ಇರುವಂತಿದೆಯಲ್ಲ ಎರಡೂ
ಆಮೇಲೆ ಯಾಕೆ ಹುಡುಕಬೇಕು ನಾಕ ನರಕ?

ಬೆಳಗನ್ನು ಹೀಗೆ ಸಂಭ್ರಮಿಸುತ್ತಾರೆ. ಮನುಷ್ಯನ ಎಲ್ಲಾ ತಾಪತ್ರಯಗಳನ್ನು ನೈಸರ್ಗಿಕ ಅಂಶಗಳು ಮಾಯ ಮಾಡುತ್ತವೆ. ಹೊಸ ಹುಮ್ಮಸ್ಸನ್ನು ನೀಡುತ್ತವೆ. ಇಳಿ ವಯಸ್ಸಿಗೆ ನಿಜ ಸಂಗಾತಿಯು ಆಗುತ್ತವೆ. ನಮ್ಮ ಸುತ್ತಮುತ್ತಲಿನ ಪರಿಸರದ ಜೊತೆಗೆ ನಮ್ಮ ನೋಟಗಳು ಸೇರಿಕೊಂಡಾಗ ಆಗುವ ಆನಂದ ಮತ್ತೊಂದಿಲ್ಲ. ಆ ಆನಂದದಲ್ಲಿಯೇ ಬದುಕಿನ ಸ್ವರ್ಗವಿದೆ ಎಂದು ಕವಿತೆ ನಂಬುತ್ತದೆ.

ದೈನಂದಿನ ಬದುಕಿನ ಸೊಬಗಿನ ಕ್ಷಣಗಳನ್ನು ತಾತ್ವಿಕವಾಗಿ ಕಟ್ಟುವ ಕಾವ್ಯ ಕಲೆಯನ್ನು ಮೊಗಸಾಲೆಯವರು ರೂಢಿಸಿಕೊಂಡಿದ್ದಾರೆ. ಸಮುದ್ರ, ಗಿಡ, ಹಕ್ಕಿ, ಇರುವೆ, ಹೂ, ಎಲೆ, ಕಾಂಡ, ಬೇರು, ತಿಳಿನೀರು, ಹಳ್ಳ-ಕೊಳ್ಳ, ಮನೆ, ಸಾಮನ್ಯರು, ಪುರಾಣದ ತ್ಯಕ್ತ ಪಾತ್ರಗಳು ಇವರ ಕಾವ್ಯದಲ್ಲಿ ಹೊಸ ಹುಟ್ಟನ್ನು ಪಡೆಯುತ್ತವೆ. ಅವುಗಳ ಸಹಜತೆಯ ಜೊತೆಗೆ ಬದುಕಿನ ಮರ್ಮವನ್ನು ಅರಿಯುವ ಪ್ರಯತ್ನ ಇವರ ಕಾವ್ಯ ಮಾಡುತ್ತದೆ. ಭೌತಿಕ ಪ್ರಪಂಚದೊಳಗೆ ಸಂತತನವನ್ನು ಕಂಡುಕೊಳ್ಳಲು ಪದ್ಯಗಳು ಹೆಣಗುತ್ತವೆ. ಲಯದ ಹಾದಿ ಕೆಲವು ಸಾರಿ ವಾಚ್ಯದ ನೆಲೆಗೆ ಸರಿಯುತ್ತದೆ. ವಾಚ್ಯ ಮತ್ತು ಲಯವನ್ನು ಬದುಕಿನ ಸಂಕೀರ್ಣತೆಯಲ್ಲಿ ಸಂಯೋಗಗೊಳಿಸುವುದು ಕವಿಗೆ ಬಹು ದೊಡ್ಡ ಸವಾಲು. ಈ ಸವಾಲನ್ನು ಇಲ್ಲಿಯ ಕವಿತೆಗಳು ದಾಟಿವೆ.

ಈ ಕವಿತೆಗಳ ಭಾಷೆ ಮೋಲ್ನೋಟಕ್ಕೆ ಸರಳವೆನಿಸಿದರೂ ಅವು ಹುಟ್ಟಿಸುವ ಅರ್ಥ ಅನುಭಾವಿಕ ಸೆಲೆಯನ್ನು ಹೊಂದಿವೆ. ಪಕೃತಿ ಮತ್ತು ಮನುಷ್ಯನ ಸಂಬಧವನ್ನು ಈ ಕವಿತೆಗಳು ಗಾಢವಾಗಿ ಚಿಂತಿಸುತ್ತವೆ. ಸಹಜತೆಯ ಪ್ರಕೃತಿಯ ಚೆಲುವು ಮನುಷ್ಯನಿಗೆ ದಕ್ಕಲು ಸಾಧ್ಯವಾದರೆ ಬದುಕಿನ ಸೌಂದರ್ಯ ಹೆಚ್ಚಾಗುತ್ತದೆ. ಆದರೆ ದೈನಂದಿನ ದಾವಂತಗಳು ಈ ಸೈಂದರ್ಯವನ್ನು ವಿರೂಪಗೊಳಿಸಿವೆ ಎಂಬ ವಿಷಾದ ಕವಿತೆಯಲ್ಲಿ ಕಂಡರೂ ಹೊಸ ಭರವಸೆಯನ್ನು ಹುಟ್ಟಿಸುತ್ತವೆ.

ತಲ್ಲಣ ನಿರೀಕ್ಷೆ ನಿರಾಶೆ ವಿಷಾದ ಆದರ್ಶಗಳೆಲ್ಲ
ಕರಿಗಿದಾಗ ಕರಗದೆ ಆಗಿ ಗಾಂಧಿ
ಅಂದೇ ಊರುಗೋಲು ಅದೇ ಕನ್ನಡಕ ಅದೇ ಹೆಜ್ಜೆ
ಮೆಲ್ಲನೆ ಉರಿಯುತ್ತಿರುತ್ತದೆ ದೇವರ ನಂದಾ ದೀಪದಲ್ಲಿ

ಗಾಂಧೀಜಿಯನ್ನು ತಪ್ಪು ವ್ಯಾಖ್ಯಾನಗಳಿಗೆ ಗುರಿ ಮಾಡಿ ಈ ಕಾಲದಲ್ಲಿ ಚಿಂತಿಸುತ್ತಿದ್ದೇವೆ.ಆದರೂ ಗಾಂಧೀಜಿಯ ವ್ಯಕ್ತಿತ್ವ, ಚಿಂತನೆ ಮುಕ್ಕಾಗುವದಿಲ್ಲ. ಏನೇ ತಲ್ಲಣ, ನಿರಾಶೆಗಳು ಜಗತ್ತನ್ನು ಮುತ್ತಿದರೂ

ಗಾಂಧೀಜಿಯ ಆಲೋಚನೆಗಳು ಪರ್ಯಾಯವನ್ನು ಸೂಚಿಸುತ್ತವೆ. ಜಗತ್ತಿಗೆ ನಂದಾ ದೀಪವಾಗಿ ಬೆಳಕು ತೋರಿಸುತ್ತವೆ. ಗಾಂಧೀಜಿಯ ಪ್ರಸ್ತುತತೆಯ ಬಗ್ಗೆ ಕವಿತೆ ಚಿಂತಿಸುತ್ತದೆ.

## ಉಪಸಂಹಾರ:

ಮೊಗಸಾಲೆಯವರ ಕಾವ್ಯ ಪಯಣದಲ್ಲಿ ಈ ಕವಿತೆಗಳು ವಿಶೇಷ ಸ್ಥಾನವನ್ನು ಪಡೆಯುತ್ತವೆ. ಈ ಕಾಲಘಟ್ಟದಲ್ಲಿ ಕಾವ್ಯ ಹೊಸ ದಾರಿಯನ್ನು ತುಳಿಯುವಲ್ಲಿ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ ಅನಿಸುತ್ತದೆ. ಈ ದ್ವಂದ್ವ ಕಾಲವನ್ನು ಕಾವ್ಯದಲ್ಲಿ ಹೇಗೆ ಹಿಡಿದಿಡಬೇಕೆಂಬ ಭಾಷಿಕ ಸಮಸ್ಯೆ ಇದೆ. ಅದಕ್ಕೆ ಗಾಢ ಚಿಂತನೆ, ಹೊಸ ಭಾಷಿಕಲಯ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಪ್ರಕೃತಿ, ಮನುಷ್ಯ, ಮಹಿಳೆ, ವಾಸ್ತವ, ಪರಂಪರೆ, ರಾಜಕಾರಣ, ಕುಟುಂಬ, ಮಾನವೀಯ ಸಂಬಂಧಗಳ ಪಲ್ಲಟಗಳನ್ನು ಗಮನಿಸುವಾಗ ಹೊಸ ಕಾವ್ಯ ಭಾಷೆ ಬೇಕಾಗುತ್ತದೆ. ಈ ಸ್ಥಿತ್ಯಂತರಗಳನ್ನು ಸರಿಯಾಗಿ ಗ್ರಹಿಸಿದ ಮೊಗಸಾಲೆಯವರು ಹೊಸ ಕಾವ್ಯಭಾಷೆಯನ್ನು ಕಟ್ಟಿದ್ದಾರೆ. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ- ದಲಿತ ಕಾವ್ಯ ಪರಂಪರೆಯನ್ನು ಅರಗಿಸಿಕೊಂಡು ಹೊಸ ಬಗೆಯ ಕಾವ್ಯವನ್ನು ಬರೆದಿದ್ದಾರೆ. ಇದು ಕಾವ್ಯ ಹೊರಳಬೇಕಾದ ದಾರಿಯನ್ನು ಸೂಚಿಸುತ್ತದೆ. ಏಕತಾನತೆಯಿಂದ ವಿವಿಧೇತೆ, ವಿವಿಧತೆಯಿಂದ ಅಗಾಧತೆಗೆ ಈ ಕವಿತೆಗಳು ಚಲಿಸುತ್ತವೆ. ಯಾವುದನ್ನು ಆರಾಧನೆಯ ಭಾವದಿಂದ ನೋಡದೆ ಬದುಕಿನ ತದಾತ್ಮ್ಯದೊಂದಿಗೆ ಚಿಂತಿಸುತ್ತವೆ. ಹೊಸ ತಲೆಮಾರಿನ ಕವಿಗಳಿಗೆ ಭಿನ್ನ ಕಾವ್ಯ ರಚನೆಯ ಮಾದರಿಯನ್ನು ಈ ಕವಿತೆಗಳು ಸೃಷ್ಟಿಸಿವೆ. ಹೀಗಾಗಿ ಈ ಕವಿತೆಗಳು ಕಾವ್ಯ ಪರಂಪರೆಯಲ್ಲಿ ನವ ದಾರಿಯನ್ನು ನಿರ್ಮಾಣ ಮಾಡುತ್ತವೆ.

## ಆಕರ ಗ್ರಂಥಗಳು :


- ದೇವರು ಮತ್ತೆ ಮತ್ತೆ, ನಾ. ಮೊಗಸಾಲೆ, ದೇಸೀ ಪುಸಕ,
- ನೀಲ ಆಕಾಶ, ನಾ. ಮೊಗಸಾಲೆ, ಸ್ನೇಹ ಎಂಟಪ್ರೈರ್ಸ್,
- ಬೇಲಿಯ ಗೂಟದಲ್ಲೊಂದು ಚಿಟ್ಟೆ, ನಾ. ಮೊಗಸಾಲೆ, ಆಲಂಪು ಪ್ರಕಾಶನ,